# ಸಮಾಜವಾದಿಯ ಚುನಾವಣೆ

'ಭಾರತದ ಚುನಾವಣೆಗಳಲ್ಲಿ ಜಾತಿ ಯಾವಾಗಲೂ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ' ಇದರ ಜೊತೆಗೆ 'ಭಾರತದಲ್ಲಿ ಇರುವಷ್ಟು ಸುಳ್ಳು ಪ್ರಪಂಚದಲ್ಲಿ ಇನ್ನೆಲ್ಲೂ ಇಲ್ಲ, ಭಾರತ ಇಂದು ಸುಳ್ಳುಗಾರರ ಮತ್ತು ದಡ್ಡರ ದೇಶವಾಗಿದೆ' ಎಂದು 60ರ ದಶಕದಲ್ಲೇ ರಾಮಮನೋಹರ ಲೋಹಿಯಾ ಭಾರತದಲ್ಲಿ ತುಕ್ಕುಹಿಡಿಯುತ್ತಿದ್ದ ಚುನಾವಣಾ ವ್ಯವಸ್ಥೆಯ ಬಗ್ಗೆ ಕಾಲಜ್ಞಾನಿಯಂತೆ ಹೇಳಿದ್ದರು! ಅಂದು ಚುನಾವಣೆಗಳಲ್ಲಿ ತೆಳುವಾಗಿ ಕಾಣಿಸಿಕೊಳ್ಳುತ್ತಿದ್ದ ಜಾತಿ, ಇಂದಿನ ಚುನಾವಣೆಗಳಲ್ಲಿ ಎಂದಿಗಿಂತ ನೂರಾರುಪಟ್ಟು ಹೆಚ್ಚಾಗಿಯೇ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿದೆ. ಇದರ ಹೆಗಲೆಣೆಯಾಗಿ ಹಣದ ಥೈಲಿ ಹಾಗೂ ಇವೆಲ್ಲದರ ರಕ್ಷಕನಾಗಿ 'ಸುಳ್ಳು' ಕೂಡ ಇದರೊಡನೆ ಸಹ ನರ್ತನದಲ್ಲಿದೆ. ಹೀಗಾಗಿ ಜಾತಿ ಮತ್ತು ಹಣ ಇಂದಿನ ಚುನಾವಣಾ ಕಣಕ್ಕೆ ಧುಮುಕುವವನ ಮೊದಲ ಅರ್ಹತೆಯಾಗಿದೆ. ಇಂತಹ ತತ್ತ್ವರಹಿತ ವ್ಯವಸ್ಥೆಯ ನಡುವೆಯೂ ನೈತಿಕ ಹಾಗೂ ಪ್ರಾಮಾಣಿಕತೆಯಿಂದ ಚುನಾವಣೆಗಳನ್ನು ಎದುರಿಸಿ ಜಯಶಾಲಿಯಾಗುತ್ತಿದ್ದ ಕನ್ನಡ ನೆಲದ ಸಮಾಜವಾದಿ ಚಿಂತನೆಯ ರಾಜಕಾರಣಿಯೊಬ್ಬರ ಚುನಾವಣಾ ಶೈಲಿಯ ಬಗ್ಗೆ ಕೇಳಿದರೆ ಮನಸ್ಸು ಗರಿಗೆದರುತ್ತದೆ! ಆ ರಾಜಕಾರಣಿ ಮಲೆನಾಡಿನಿಂದ ಬಂದ ಶಾಂತವೇರಿ ಗೋಪಾಲಗೌಡ. ಅಲ್ಲಿನ ಜನ ಇವರನ್ನು 'ಮಲೆನಾಡಿನ ಗಾಂಧಿ' ಎಂದೂ ಕರೆಯುತ್ತಿದ್ದರು.

ನೈತಿಕ ಮತ್ತು ತತ್ತ್ವಬದ್ಧ ರಾಜಕಾರಣಕ್ಕೆ ತಮ್ಮ ರಾಜಕಾರಣದ ಗುರು ರಾಮಮನೋಹರ ಲೋಹಿಯಾ ಅವರಿಗೆ ಸರಿಗಟ್ಟುವಂತೆ ಇದ್ದ ಶಾಂತವೇರಿ ಗೋಪಾಲಗೌಡರು ಮೂರು ಸಲ ಶಾಸಕರಾಗಿದ್ದರೂ, ಇರಲೊಂದು ಮನೆ, ತುಂಡು ಭೂಮಿಯೂ ಇಲ್ಲದ ಬರಿಗೈ ಶಾಸಕರಾಗಿದ್ದರು. ಪ್ರವಾಹಕ್ಕೆ ಎದುರಾಗಿ ನಿಂತು ಈಸುವ ಗುಣದ ಗೋಪಾಲಗೌಡರ ವ್ಯಕ್ತಿತ್ವದಲ್ಲಿದ್ದ ಸರಳತೆ ಮತ್ತು ಮಾನವೀಯ ಗುಣಕ್ಕೆ ಮಾರುಹೋಗದವರೇ ಇರಲಿಲ್ಲ. ಕ್ಷೇತ್ರದ ಜನಸಾಮಾನ್ಯರೆ ಅವರ ಚುನಾವಣೆಗೆ ಠೇವಣಿ ಹಣವನ್ನು ಸಂಗ್ರಹಿಸಿ ಕಟ್ಟುತ್ತಿದ್ದರು. ಜೇಬಿನಲ್ಲಿ ನಯಾಪೈಸೆಯೂ ಇಲ್ಲದ ಗೋಪಾಲಗೌಡರ ಚುನಾವಣಾ ಪ್ರಚಾರ ಸಭೆಗಳು ಇಂದಿಗೂ ಆ ಭಾಗದಲ್ಲಿ ದಂತಕಥೆಗಳಂತೆ ಹಬ್ಬಿವೆ.

ಗೋಪಾಲಗೌಡರ ಚುನಾವಣಾ ಭಾಷಣವೆಂದರೆ, ಅದು ಕೇವಲ ಮತ ಕೇಳುವ ಭಾಷಣವಾಗುತ್ತಿರಲಿಲ್ಲ! ಪಂಪನ ಕಾವ್ಯದ ಬನವಾಸಿ ವರ್ಣನೆಯಿಂದ ಶುರುವಾಗಿ ಕುಮಾರವ್ಯಾಸ, ಕುವೆಂಪು, ಬೇಂದ್ರೆ, ಗೋಪಾಲಕೃಷ್ಣ ಅಡಿಗರ ಕಾವ್ಯಭಾಗಗಳನ್ನು ಉದ್ಧರಿಸುತ್ತಾ ಸಮಕಾಲೀನ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಚಿಂತನೆಗಳಿಂದ ಕೂಡಿರುತ್ತಿತ್ತು. ರಾತ್ರಿ 9 ಗಂಟೆಗೆ ನಿಗದಿಯಾಗಿರುತ್ತಿದ್ದ ಪ್ರಚಾರ ಭಾಷಣಕ್ಕೆ ಗೋಪಾಲಗೌಡರು ರಾತ್ರಿ 12 ಗಂಟೆಗೆ ಬಂದರೂ, ಜನ ಭಾಷಣ ಕೇಳಲು ಕೊರೆಯುವ ಚಳಿಯಲ್ಲೂ ಕಾಯುತ್ತಾ ಕುಳಿತಿರುತ್ತಿದ್ದರು. ಇವರ ಭಾಷಣ ಬೆಳಗಿನ ಜಾವ 4 ಗಂಟೆಯ ಹೊತ್ತಿಗೆ ಮುಗಿಯುತ್ತಿತ್ತು. ಇವರ ಭಾಷಣ ತಮಾಷೆ, ವ್ಯಂಗ್ಯ, ಸಾಹಿತ್ಯ, ಕಲೆ, ರಾಜಕಾರಣ ಎಲ್ಲವೂ ಬೆರೆತ ತಿಳಿವಳಿಕೆ ನೀಡುವ ಮಾತುಗಳಾಗಿರುತ್ತಿದ್ದವು. ಅನೇಕ ವೇಳೆ ಗೋಪಾಲಗೌಡರು ತಮ್ಮ ಮಾತಿನ ಭರದಲ್ಲಿ ವೋಟು ಕೇಳುವುದನ್ನೇ ಮರೆತುಬಿಡುತ್ತಿದ್ದರು! ಆಗ ಪಕ್ಕದಲ್ಲಿರುವವರು ಯಾರಾದರೂ ಎಚ್ಚರಿಸಿದರೆ, ನೆಪಕ್ಕೆ ಮಾತ್ರ ಮತ ಕೇಳುತ್ತಿದ್ದರು. 'ಇದು ಚುನಾವಣಾ ಭಾಷಣ ಅಲ್ಲ ಬಿಡಿ! ಈ ತರಹದ ಭಾಷಣಗಳನ್ನು ನಾವೆಂದೂ ಕೇಳೇ ಇಲ್ಲ' ಎಂದು ಜನ ಹೇಳುತ್ತಿದ್ದರು. ವೋಟಿನ ಆಸೆಗಾಗಿ ದೇವಸ್ಥಾನ, ಮಸೀದಿ, ಚರ್ಚ್‌ಗಳಿಗೆ ಎಂದೂ ಹೋದವರಲ್ಲ! 'ಇವರು ನನಗೆ ವೋಟು ಕೊಡದಿದ್ದರೂ ಚಿಂತೆಯಿಲ್ಲ, ನಾನು ಅಲ್ಲಿಗೆ ಹೋಗಲಾರೆ!' ಎಂದು ಖಡಕ್ಕಾಗಿ ಹೇಳುತ್ತಿದ್ದರು. ಆ ದಿನಗಳಲ್ಲಿ ಚುನಾವಣಾ ವೆಚ್ಚವೆಲ್ಲ ಕೇವಲ ಏಳೆಂಟು ಸಾವಿರಗಳಲ್ಲಿ ಮುಗಿದುಹೋಗುತ್ತಿತ್ತು! ಈ ಹಣವನ್ನು ಅವರ ಸ್ನೇಹಿತರು ಅಲ್ಲಿ ಇಲ್ಲಿ ಸಾಲ ಮಾಡಿ ತೀರಿಸುತ್ತಿದ್ದರು! ಇವರ ಮೊದಲ ಚುನಾವಣೆಯಲ್ಲಿ ಯು.ಆರ್. ಅನಂತಮೂರ್ತಿ ಅವರ ಚುನಾವಣಾ ಏಜೆಂಟ್ ಆಗಿ ಕಾರ್ಯನಿರ್ವಹಿಸಿದ್ದರು! ಗೋಪಾಲಗೌಡರು ಆ ಚುನಾವಣೆಯಲ್ಲಿ ಜಯಗಳಿಸಿದರು. ಗೋಪಾಲಗೌಡರು ಎದುರಿಸಿದ ನಾಲ್ಕು ಚುನಾವಣೆಗಳೂ ಇದೇ ಕತೆಯನ್ನೇ ಹೇಳುತ್ತವೆ.

ಗೋಪಾಲಗೌಡರು ಶಾಸಕರಾಗಿದ್ದಾಗ ತೀರ್ಥಹಳ್ಳಿಗೆ ಬಂದರೆ, ಸ್ನೇಹಿತರು, ಸಮಾಜವಾದಿ ಪಕ್ಷದ ಕಾರ್ಯಕರ್ತರು ಹಾಗೂ ಗೇಣಿದಾರ ರೈತರೊಂದಿಗೆ ಸೇರಿ, ಶಾಸನ ಸಭೆಯಲ್ಲಿ ಯಾವ ಸಮಸ್ಯೆಗಳನ್ನು ಕುರಿತು ಮಾತನಾಡಬೇಕು ಎಂದು ಎಲ್ಲರೊಂದಿಗೆ ಚರ್ಚಿಸುತ್ತಿದ್ದರು. ತಮ್ಮ ಜೀವಿತದಲ್ಲಿ ಎಂದೂ ಶ್ರೀಮಂತರ, ಭೂಮಾಲೀಕರ ಮನೆಯ ಹೊಸ್ತಿಲು ತುಳಿಯಲಿಲ್ಲ! ಸ್ವಾಭಿಮಾನದ ಮೇರು ಶಿಖರದಂತೆ ಬಾಳಿದರು. ಒಂದು ಸಲ ಅವರ ಕ್ಷೇತ್ರದ ಗೇಣಿದಾರ ರೈತರೊಬ್ಬರು ತಮ್ಮ ಭಾಗದ ಸಮಸ್ಯೆಗಳನ್ನು ಕುರಿತು ಪೋಸ್ಟ್‌ಕಾರ್ಡಿನಲ್ಲಿ ಬರೆದು ಕಳುಹಿಸಿದ್ದರು. ಗೋಪಾಲಗೌಡರು ಅದೇ ಪೋಸ್ಟ್‌ಕಾರ್ಡನ್ನು ವಿಧಾನಸಭೆಯಲ್ಲಿ ಓದಿ, ಸರ್ಕಾರದಿಂದ ಸಮಜಾಯಿಷಿ ಕೇಳಿದ್ದರು!

ಒಂದು ಸಲ ಗೋಪಾಲಗೌಡರ ಹತ್ತಿರ ಸ್ನೇಹಿತರೊಬ್ಬರು, ತಮ್ಮ ಚಿಕ್ಕಪ್ಪನ ಮಗನಿಗೆ ಸ್ಕಾಲರ್‌ಶಿಪ್ ಕೊಡಿಸಿಕೊಡಿ ಎಂದು ಕೇಳಿದರು, ಅದಕ್ಕೆ ಗೋಪಾಲಗೌಡರು 'ನಿಮ್ಮವರಿಗೆ ಸ್ವಲ್ಪವಾದರೂ ಆಸ್ತಿ–ಮನೆ ಇದೆ. ಆದರೆ ನಿರ್ಗತಿಕರು, ಹಣವಿಲ್ಲದೆ ಓದಲಾಗದವರು, ಒಂದೊತ್ತಿನ ಊಟಕ್ಕೂ ಗತಿಯಿಲ್ಲದ ಎಷ್ಟೋ ಹುಡುಗರು ಇದ್ದಾರೆ. ಅವರಿಗೆಲ್ಲಾ ಕೊಟ್ಟು ಉಳಿದರೆ ನಿಮ್ಮ ಹುಡುಗನಿಗೆ ಕೊಡುತ್ತೇನೆ' ಎಂದು ಖಡಕ್ಕಾಗಿ ಹೇಳಿದರು!

ಸಮಾಜವಾದಿ ಪಕ್ಷದ ಕಾರ್ಯಕರ್ತರೊಬ್ಬರು ಇವರ ಬಳಿ ಬಂದು ತಮಗೆ ಜಮೀನು ಮಂಜೂರಾತಿ ಮಾಡಿಕೊಡಿಸಬೇಕೆಂದು ಕೇಳಿದರು. ಗೋಪಾಲಗೌಡರು 'ನಾನು ಕೇವಲ ನಿನಗೆ ಮಾತ್ರ ಜಮೀನು ಮಂಜೂರು ಮಾಡಿಕೊಡಲು ಶಾಸಕನಾಗಲಿಲ್ಲ! ನಿನಗೂ ಹಾಗೂ ಎಲ್ಲ ಭೂಹೀನರಿಗೂ ಭೂಮಿ ಸಿಗುವ ಹಾಗೆ ಕಾನೂನು ಮಾಡಿಸಲು ಬಂದಿದ್ದೇನೆ. ನಾನು ಕಾನೂನು ಮಾಡುವವನು; ನೀನು ಕಾನೂನು ಮಾಡಿಸುವವನು. ಹೋಗಿ, ರೈತರ ಕಷ್ಟ ಮೊದಲು ನೋಡಿ. ನಾವು ಬಡಜನರಿಗಾಗಿ ದುಡಿಯುವವರು. ಯಾವ ಅಪೇಕ್ಷೆಯನ್ನೂ ಇಟ್ಟುಕೊಳ್ಳಬಾರದು! ನಾವೆಲ್ಲಾ ಹೋರಾಟದಲ್ಲಿ ಗೊಬ್ಬರವಾಗಬೇಕು, ಅದರ ಮೇಲೆ ಸಮಾನತೆಯ ಸಮಾಜ ಮೊಳಕೆಯೊಡೆದು ಫಲ ಸಿಗಬೇಕು' ಎಂದು ಶಾಂತವಾಗಿ ಹೇಳಿದರು.

'ಕೋಟಿ'ಗಟ್ಟಲೆ ಬಂಗಾರ ಮತ್ತು ಹಣವನ್ನು ತುಂಬಿಕೊಂಡಿರುವ ಇಂದಿನ ರಾಜಕಾರಣಿಗಳ ನಡುವೆ, ಗೋಪಾಲಗೌಡರಂಥ ಸರಳ ಮತ್ತು ಸೂಕ್ಷ್ಮ ಮನಸ್ಸಿನ ರಾಜಕಾರಣಿಯನ್ನು ನೆನೆಯುವುದು ನಮ್ಮ ಕರ್ತವ್ಯ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ವಿದ್ಯೆ ಒಂದೊಂದು ಕಡೆ ಒಂದೊಂದು ಬಗೆಯ ಹಣ್ಣು ಕೊಡುತ್ತದೆ.
  —ಪಂಜೆ ಮಂಗೇಶ ರಾವ್
- ಮನಸ್ಸಿನ ವಿಕಾಸವು ಮಾನವನ ಅಸ್ತಿತ್ವದ ಅಂತಿಮ ಗುರಿಯಾಗಿರಬೇಕು.
  —ಬಿ.ಆರ್. ಅಂಬೇಡ್ಕರ್
- ಆನೆಯನು ಏರುವಡೆ, ದಾನವನು ಮಾಡುವುದು, ಬಾನು ಮಂಡಲವ ನಡರುವಡೆ ಹಸಿದವರಿಗೆ ನೀನೊಲಿದು ಇಕ್ಕು ಸರ್ವಜ್ಞ.
  —ಸರ್ವಜ್ಞ
- ನಿನ್ನನ್ನು ನೀನು ನಂಬುವುದಾದರೆ ಪರಮಾತ್ಮನನ್ನು ನಂಬಿದಂತೆ.
  —ಸ್ವಾಮಿ ವಿವೇಕಾನಂದ
- ಒಳ್ಳೆಯದು ಉಳಿಯಬೇಕಾದರೆ ಕೆಟ್ಟವರೊಂದಿಗೆ ಹೋರಾಡಬೇಕು.
  —ಅನಕೃ
- ಜಗತ್ತು ಬದಲಾಗಬೇಕು ಎನ್ನುವವರು ಮೊದಲು ತಮ್ಮಿಂದಲೇ ಬದಲಾವಣೆಯಾಗಬೇಕು ಎಂಬುದನ್ನು ಅರಿತುಕೊಳ್ಳಬೇಕು.
  —ಮಹಾತ್ಮ ಗಾಂಧಿ